ಗ್ರಾಮಪಂಚಾಯತಿಗಳಲ್ಲಿ 10 ವರ್ಷಕ್ಕೆ ಮೇಲ್ಪಟ್ಟು ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಮುಂಬಡ್ತಿ

1223 (1380) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯತಿಗಳಲ್ಲಿ ಸುಮಾರು 10 ವರ್ಷದಿಂದ ಸೇವೆ ಸಲ್ಲಿಸುತ್ತಿರುವ (10 ವರ್ಷಗಳ ಮೇಲ್ಪಟ್ಟು) ನೌಕರರಿಗೆ ಸರ್ಕಾರವು ಮುಂಬಡ್ತಿ ನೀಡಲು ಸಮೀಕ್ಷೆ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಎಷ್ಟು ಜನ ನೌಕರರು ಮುಂಬಡ್ತಿ ಹೊಂದಲಿದ್ದಾರೆ; ಈ ಮುಂಬಡ್ತಿ ಆದೇಶವನ್ನು ಯಾವಾಗ ನೀಡಲಾಗುವುದು;

ಆ) ಮುಂಬಡ್ತಿ ಆದೇಶವನ್ನು ಪೂರ್ವಾನ್ವಯಗೊಳ್ಳುವಂತೆ ಏನಾದರೂ ಜಾರಿ ಮಾಡಲಾಗುತ್ತಿದೆಯೇ; ಇದ್ದಲ್ಲಿ, ಯಾವ ದಿನಾಂಕದಿಂದ ಪೂರ್ವಾನ್ವಯವಾಗುವಂತೆ ಮುಂಬಡ್ತಿ ನೀಡಲಾಗುವುದು; ವಿವರ ನೀಡುವುದು;

ಇ) ಈವರೆಗೂ ಮುಂಬಡ್ತಿ ನೀಡಲು ಸಾಧ್ಯವಾಗದೇ ಇರುವುದಕ್ಕೆ ಕಾರಣವೇನು; ಹಾಗೂ ಮುಂಬಡ್ತಿ ನೀಡಲು ತೆಗೆದುಕೊಂಡಿರುವ ಕ್ರಮ ಹಾಗೂ ಮಾನದಂಡವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಮಾಡಲಾಗಿದೆ.

ಪ್ರಸ್ತುತ 10 ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಿರುವ 2773 ಗ್ರಾಮ ಪಂಚಾಯಿತಿ ನೌಕರರು ನೇಮಕಾತಿಗೆ ಅರ್ಹರಿರುತ್ತಾರೆ. ಗ್ರೇಡ್-2 ಕಾರ್ಯದರ್ಶಿಗಳ ಹುದ್ದೆಗಳಲ್ಲಿ ಶೇ.30 ಭಾಗ ಈ ನೌಕರರಿಗೆ ಮೀಸಲಿಡಲಾಗಿದೆ. ಈ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಈ ನೌಕರರಿಗೆ ಮುಂಬಡ್ತಿ ನೀಡಲಾಗುವುದು.

ಆ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಇ) ಗ್ರಾಮ ಪಂಚಾಯತ್ ಕಾರ್ಯದರ್ಶಿಗಳ ಹುದ್ದೆಗಳು ಜಿಲ್ಲಾ ಮಟ್ಟದ ಹುದ್ದೆಗಳಾಗಿರುವುದರಿಂದ ಆಯಾ ಜಿಲ್ಲಾ ಪಂಚಾಯತಿಗಳಲ್ಲಿ ತೆರವಾಗಲಿರುವ ಹುದ್ದೆಗಳಿಗೆ ಅವಕಾಶವಿದ್ದಾಗ ಮಾತ್ರ ಭರ್ತಿ ಮಾಡಲು ನಿಯಮದಲ್ಲಿ ಅವಕಾಶವಿರುತ್ತದೆ.

ಗ್ರಂಥಾಲಯ ನೌಕರರನ್ನು ಖಾಯಂ ಗೊಳಿಸುವ ಬಗ್ಗೆ

1225(1382) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ಇರುವ ಗ್ರಂಥಾಲಯಗಳು ಎಷ್ಟು;

ಗ್ರಂಥಾಲಯಗಳಲ್ಲಿ ಖಾಯಂ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು ಎಷ್ಟು;

ಹಂಗಾಮಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಅಥವಾ ಇಲಾಖೆಯ ಅಧೀನಕ್ಕೊಳಪಟ್ಟು ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು;

ಆ) ಖಾಯಂ ಆಲ್ಲದ ನೌಕರರುಗಳಿಗೆ ಯಾವ ರೀತಿಯಲ್ಲಿ ಇಲಾಖೆಯು ಪರಿಗಣನೆ ಮಾಡುತ್ತಿದೆ;

ಈ ನೌಕರರನ್ನು ಖಾಯಂ ಮಾಡಲು ಸರ್ಕಾರವು ಏನಾದರೂ ಕ್ರಮ ಕೈಗೊಂಡಿದೆಯೇ; ಖಾಯಂಗೊಳಿಸಲು ಕ್ರಮ ಕೈಗೊಂಡಿದ್ದಲ್ಲಿ ಅದರ ಮಾನದಂಡವೇನು; ಹಾಗೂ ಯಾವಾಗ ಖಾಯಂಗೊಳಿಸಲಾಗುವುದು?

ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :

ಅ) ರಾಜ್ಯಾದ್ಯಂತ 3246 ಗ್ರಂಥಾಲಯಗಳು ಇರುತ್ತವೆ.

ಈ ಗ್ರಂಥಾಲಯಗಳಲ್ಲಿ 1302 ಖಾಯಂ ನೌಕರರು ಇರುತ್ತಾರೆ.

160 ಶುಚಿಗಾರರು ಹಂಗಾಮಿಯಾಗಿ ಹಾಗೂ ಇಲಾಖೆಯ ಅಧೀನಕ್ಕೊಳಪಡುವ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಗೌರವ ಸಂಭಾವನೆ ಪಡೆಯುವ 2728 ಮೇಲ್ವಿಚಾರಕ ಸಿಬ್ಬಂದಿಗಳಿರುತ್ತಾರೆ.

ಆ) ಈ ನೌಕರರನ್ನು ಮಾಸಿಕ ಗೌರವ ಸಂಭಾವನೆಯ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಎಂದು ಪರಿಗಣಿಸಿದೆ.

ಇ) ಪ್ರಸಕ್ತ ನಿಯಮಾವಳಿಗಳಲ್ಲಿ ಈ ನೌಕರರನ್ನು ಖಾಯಂ ಮಾಡಲು ಅವಕಾಶ ಇರುವುದಿಲ್ಲ.

ಅನ್ವಯಿಸುವುದಿಲ್ಲ.

ಅನ್ವಯಿಸುವುದಿಲ್ಲ.

ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಅನುದಾನಿತ ಪ್ರೌಢ-ಪ್ರಾಥಮಿಕ ಶಾಲೆಗಳ ಶಿಕ್ಷಕರ ಹುದ್ದೆಗಳ ಭರ್ತಿ

1228(1608) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಅನುದಾನಿತ ಪ್ರೌಢ-ಪ್ರಾಥಮಿಕ ಶಾಲೆಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು).

ಆ) ಈ ಶಾಲೆಗಳಲ್ಲಿರುವ ಖಾಲಿ ಹುದ್ದೆಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ಖಾಲಿ ಹುದ್ದೆಗಳ ಭರ್ತಿಗೆ ಕೈಗೊಂಡಿರುವ ಕ್ರಮಗಳೇನು;

ಈ) ರಾಜ್ಯದ ಅನುದಾನಿತ ಪ್ರಾಥಮಿಕ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕದ ಮೇಲೆ ನಿಷೇಧ ಹೇರಲಾಗಿದ್ದುದು ನಿಜವೇ; ನಿಷೇಧ ಹೇರಿದ್ದು ಯಾವಾಗ;

ಉ) ನಿಷೇಧವನ್ನು ರದ್ದುಪಡಿಸಲಾಗಿದೆಯೇ; ರದ್ದುಪಡಿಸಿದ್ದಲ್ಲಿ, ಎಂದು ರದ್ದುಪಡಿಸಲಾಗಿದೆ?

ಪೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಅನುದಾನಿತ ಪ್ರೌಢಶಾಲೆಗಳು - 2,524

ಅನುದಾನಿತ ಪ್ರಾಥಮಿಕ ಶಾಲೆಗಳು - 2,422

(ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)